ಶಿಡ್ಲಘಟ್ಟದಲ್ಲಿ ಪ್ರಾಥಮಿಕ ಶಾಲಾ ಕಟ್ಟಡದ ಬಗ್ಗೆ

೩೭೯ (೧೭೯) ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಶಿಡ್ಲಘಟ್ಟ ಟೌನ್‌ನಲ್ಲಿರುವ ಪ್ರಾಥಮಿಕ ಬಾಲಕ ಬಾಲಕಿಯರ ಶಾಲೆಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಹಾಲಿ ಶಿಥಿಲವಾಗಿರುವ ಶಾಲಾ ಕಟ್ಟಡದ ಭಾಗದಲ್ಲಿ ಹೊಸ ಶಾಲಾ ಕಟ್ಟಡ ಕಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).

ಅ) ಹೌದು.

ಆ) ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಕಟ್ಟಡ ಕಟ್ಟಲು ಈ ವರ್ಷ ಒಂದು ಲಕ್ಷ ರೂ. ಬಿಡುಗಡೆ ಮಾಡಲಾಗಿದೆ.

ಶ್ರೀ ವಿ. ಮುನಿಯಪ್ಪ.—ಈಗ ಈ ಎಲ್ಲಾ ಶಾಲೆಗಳಲ್ಲಿ ಏಳುನೂರು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಬಾಡಿಗೆಯ ಕಟ್ಟಡದಲ್ಲಿ ಈ ತರಗತಿಗಳನ್ನು ನಡೆಸಲಾಗುತ್ತಿದೆ. ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಕಟ್ಟಡ ಕಟ್ಟಲು ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ತಾವು ಹೇಳಿದ್ದೀರಿ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರಿಗೆ ಕಟ್ಟಡ ಕಟ್ಟಲು ಆದೇಶ ನೀಡಲಾಗಿದೆಯೆ?

ಶ್ರೀ ಬಿ. ರಾಚಯ್ಯ.—ಇದನ್ನು ಮಾಡಿಸಿಕೊಡುತ್ತೇನೆ.

ಅರಸೀಕೆರೆ ಕ್ಷೇತ್ರದಲ್ಲಿರುವ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು

೩೭೪(೧) ಶ್ರೀ ಜಿ.ಎಸ್. ಬಸವರಾಜು (ಅರಸೀಕೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ಅರಸೀಕೆರೆ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು ?

ಆ) ಸರ್ಕಾರದ ವತಿಯಿಂದ ನಡೆಯುತ್ತಿರುವ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಎಷ್ಟು ಶಾಲೆಗಳಿಗೆ ಕಟ್ಟಡಗಳನ್ನು ಒದಗಿಸಲಾಗಿದೆ?

ಇ) ಎಷ್ಟು ಶಾಲೆಗಳಿಗೆ ಕಟ್ಟಡ ಒದಗಿಸಬೇಕಾಗಿದೆ.

ಈ) ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವಶ್ಯಕವಾದ ಕಟ್ಟಡಗಳಿಗೆ ಸರ್ಕಾರದವರು ಯೋಜನೆಗಳನ್ನು ರೂಪಿಸಿದ್ದಾರೆಯೆ ?

ಉ) ಈ ಯೋಜನೆಯ ವಿವರಗಳೇನು ?

ಊ) ಈ ಯೋಜನೆಗಳನ್ನು ಎಷ್ಟು ಅವಧಿಯಲ್ಲಿ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಕಿರಿಯ ಪ್ರಾಥಮಿಕ ಶಾಲೆಗಳು–೧೭೮ಹಿರಿಯ ಪ್ರಾಥಮಿಕ ಶಾಲೆಗಳು (ಮಾಧ್ಯಮಿಕ ಶಾಲೆಗಳು)—೭೪

ಆ) ಕಿರಿಯ ಪ್ರಾಥಮಿಕ ಶಾಲೆಗಳು—೧೬೪. ಹಿರಿಯ ಪ್ರಾಥಮಿಕ ಶಾಲೆಗಳು—೭೧

ಇ) ಕಿರಿಯ ಪ್ರಾಥಮಿಕ ಶಾಲೆಗಳು—೧೪ ಹಿರಿಯ ಪ್ರಾಥಮಿಕ ಶಾಲೆಗಳು—೩

ಈ) ಹೌದು.

ಉ) ಸ್ಥಳೀಯ ಸಂಸ್ಥೆಗಳು, ಶಾಲಾಭಿವೃದ್ಧಿ

ಊ) ಸಮಿತಿ ಇವುಗಳಿಗೆ ಶಾಲಾ ಕೊಠಡಿ ಕಟ್ಟಲು ಕೊಠಡಿ ಒಂದಕ್ಕೆ ಸಾಮಾನ್ಯ ಯೋಜನೆಯಲ್ಲಿ ೬೦೦೦ ರೂ.ಗಳಂತೆಯೂ ಎಸ್‌ಸಿ ವಿಶೇಷ ಯೋಜನೆಯಲ್ಲಿ ೧೨,೦೦೦ ರೂ.ಗಳನ್ನು ಅನುದಾನ ನೀಡಲಾಗುವುದು (ಎಸ್.ಆರ್.ಇ.ಪಿ.ಯಲ್ಲಿ ಪ್ರತಿ ಕೊಠಡಿಗೆ ೧೨,೦೦೦ ರೂ.ಗಳನ್ನು ಮೀಚ್ಚ ಮಾಡಬಹುದು ಇವೆಲ್ಲ ಯೋಜನೆಗಳ ಪ್ರಯೋಜನ ಪಡೆದುಕೊಂಡು ಹಂತ ಹಂತವಾಗಿ ಈ ವರ್ಷದಿಂದಲೇ ಅವಶ್ಯಕ ಕೊಠಡಿಗಳ ನಿರ್ಮಾಣ ಮಾಡಲಾಗುವುದು.

ಶ್ರೀ ಜಿ.ಎಸ್. ಬಸವರಾಜು.—ಅಧ್ಯಕ್ಷರೇ, (ಅ) ಪ್ರಶ್ನೆಗೆ ಉತ್ತರವಾಗಿ ೧೬೪ ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ೭೧ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸರ್ಕಾರದ ಪರವಿಯಿಂದ ಕಟ್ಟಡಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಿರಿ. ಅರಸೀಕೆರೆ ತಾಲ್ಲೂಕಿನಾದ್ಯಂತ ಪ್ರತಿಯೊಂದು ಸಂತಶಾಲೆಯನ್ನೂ ನಾನು ನೋಡಿಕೊಂಡು ಬಂದಿದ್ದೇನೆ. ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಮುಂದುವರೆದರೆ, ಮೊನ್ನೆತಾನೆ ಕಟ್ಟಡ ಕುಸಿದು ದುರಂತ ಸಂಭವಿಸಿದಂತೆ, ಸುಮಾರು ೨೫೦–೩೦ ಶಾಲಾ ಕಟ್ಟಡಗಳು ಕುಸಿದು ಶಾಲಾ ಮಕ್ಕಳು ಸಾವನ್ನಪ್ಪಂತಹ ಪರಿಸ್ಥಿತಿ ಇದೆ. ಹಿಂದೆ ಪಾವಗಡದಲ್ಲಿ ಈ ರೀತಿ ಆಗಿದ್ದನ್ನು ನೋಡಿದ್ದೇವೆ. ಆದ್ದರಿಂದ ದಯವಮಾಡಿ ಸರ್ಕಾರದವರು ಪಾವಗಡದಲ್ಲಿ ಸೂಕ್ತ ಕ್ರಮ ಕೈಗೊಂಡ ರೀತಿಯಲ್ಲಿ ಕೂಡಲೇ ಇಲ್ಲಿ ಸಾಯತಕ್ಕಂಥ ಮಕ್ಕಳನ್ನು ಬದುಕಿಸ ಬೇಕೆಂದು ಆ ಕ್ಷೇತ್ರದ ಪರವಾಗಿ ತಮ್ಮ ಮುಖಾಂತರ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಸ್ಥಳೀಯ ಶಾಸಕರು ಬಹಳ ಪ್ರಭಾವಿತರಾಗಿದ್ದಾರೆ. ಮುನಿಸಿಪಾಲಿಟಿ ಪ್ರದೇಶಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಪುರಸಭೆಯ ಒಂದು ಭಾಗ ಕೊಡುವ ವ್ಯವಸ್ಥೆ ಮಾಡಿದ್ದೇವೆ. ವಿಶೇಷವಾಗಿ ಬಿದ್ದು ಹೋಗಿರತಕ್ಕಂಥ ಕಟ್ಟಡಗಳಿಗೆ ದುರಸ್ತಿ ಮಾಡಲು ಮತ್ತು ಶಾಲಾ ಕಟ್ಟಡಗಳನ್ನು ಕಟ್ಟಲು ಜೊಸದಾಗಿ ತೊಂಬತ್ತು ಲಕ್ಷ ರೂಪಾಯಿಂಗಳನ್ನು ಇಟ್ಟಿದ್ದೇವೆ. ಈ ದೃಷ್ಟಿಯಿಂದ ಈ ಕ್ಷೇತ್ರದಲ್ಲಿ ಬಿದ್ದು ಹೋಗಿರುವಂತಹ ಕಟ್ಟಡದ ದುರಸ್ತಿಗೆ ವ್ಯವಸ್ಥೆಯನ್ನು ಮಾಡಲಾಗುವುದು.

ಒಬ್ಬರು ಮಾನ್ಯ ಸದಸ್ಯರು.—ಸರ್ಕಾರದ ಅನುದಾನ ಪಡೆಯುವ ಸ್ಥಳೀಯ ಸಂಸ್ಥೆಗಳು ಕಟ್ಟಡ ಕಟ್ಟಬೇಕಾದರೆ ಸಾಮಾನ್ಯ ಯೋಜನೆಯಲ್ಲಿ ಒಂದು ಕೊಠಡಿಗೆ ಆರು ಸಾವಿರ ರೂಪಾಯಿಗಳು ಮತ್ತು ವಿಶೇಷ ಯೋಜನೆಯಲ್ಲಿ ಹನ್ನೆರಡು ಸಾವಿರ ರೂಪಾಯಿಗಳನ್ನು ನೀಡಲಾಗುವುದು ಎಂದು ಹೇಳಿದ್ದಿರಿ. ಆರು ಸಾವಿರ ಇದ್ದುದನ್ನು ಪತ್ತು ಸಾವಿರಕ್ಕೆ ಏರಿಸಲು ಸರ್ಕಾರಕ್ಕೆ ಇರುವ ತೊಂದರೆಯಾದರೂ ಏನು ?

ಶ್ರೀ ಬಿ. ರಾಚಯ್ಯ.—ಇದನ್ನು ಪರಿಶೀಲಿಸುತ್ತೇನೆ.

ರೈತರು ಬೆಳೆದ ಹುಟ್ಟುವಳಿ ದಾಸ್ತಾನಿನ ಮೇಲೆ ಲೆವಿಯ ವಿನಾಯಿತಿ

೩೭೫ (೨೪೪) ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).—ವ್ಯವಸಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ರೈತರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಲೆವಿ ಇಲ್ಲದ ಹುಟ್ಟುವಳಿ ದಾಸ್ತಾನು ಮಾಡಲು ಏನಾದರೂ ಸರ್ಕಾರದ ನಿರ್ಬಂಧವೇನಾದರೂ ಇದೆಯೆ ?

ಆ) ಹಾಗಿದ್ದಲ್ಲಿ ಯಾವ ಬೆಳಗಳಿಗೆ ?

ಶ್ರೀ ಎಫ್.ಎ. ಕೊಪ್ಪದ.—ಹೈಬ್ರೆಡ್ ಜೋಳವನ್ನು ಮಾರಲಿಕ್ಕೆ ಹೋದರೆ ಪರ್ಮಿಟ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಇದನ್ನು ದಾಸ್ತಾನು ಮಾಡಲು ಸರ್ಕಾರದ ನಿರ್ಬಂಧವಿದೆಯೆಂದು ಕೇಳಿದ್ದೇವೆ. ಇದನ್ನು ಮಾರುವುದರ ಬಗ್ಗೆ ಯಾವುದೇ ವ್ಯವಸ್ಥೆ ಮಾಡದೇ ಇರುವುದರಿಂದ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಈಗಿನ ಕಾನೂನು ಪ್ರಕಾರ ಲೆವಿ ಪದ್ಧತಿ ಬತ್ತ ಅಕ್ಕಿಗೆ ಮಾತ್ರ ಸೀಮಿತವಾಗಿದೆ. ಜೋಳಕ್ಕೆ ಯಾವ ನಿರ್ಬಂಧವೂ ಇಲ್ಲ. ಆದರೆ ೨೫ ಕ್ವಿಂಟಾಲ್‌ಗಿಂತ ಹೆಚ್ಚು ಜೋಳವನ್ನು ಇಟ್ಟುಕೊಂಡರೆ ಆ ಬಗ್ಗೆ ಘೋಷಣೆ ಮಾಡಬೇಕಾಗುತ್ತದೆ.